KACM010001992016

Presented on : 07-01-2016
Registered on : 07-01-2016

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**

**SPL.C/1/2016**

Complainant(PROSECUTION):
State by- Karnataka Lokayuktha Police, Chikkamagaluru.

**VERSUS**

Accused:
Sri. Channabasappa, So. Ambaraya Makale, aged 50 years, Executive Officer, Taluk Panchayath Office, Mudigere, Chikkamagaluru District, No. Nasiravadi Village, Kasaba Hobli, Alanda Taluk, Kalaburgi District.

----------------------------------------------------------------------------

State Complainant}: Spl. Public Prosecutor,
Sri. K.S.SHANTHIPRAKASH appearing for accused

----------------------------------------------------------------------------

Offence punishable under : U/Sec.13(1)(E)r/w13(2)ofPCAct1988. of PREVENTION OF CORRUPTION ACT,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

**Spl.C No:1/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾಃ ಶಿವಶೇಖರ್.ಎಂ. | ಪ್ರಾ.ಸಾ.- 34 |
| ತಂದೆಯ ಹೆಸರು | : | ಮಡಿವಾಳಪ್ಪ | ಚಾ.ಸಾ.- 79 |
| ವಯಸ್ಸು | : | 53 ವರ್ಷ | |
| ಉದ್ಯೋಗ | : | ಅಸೋಸಿಯೇಟ್ ಪ್ರೊಫೆಸರ್,<br>Godutai Engineering College,<br>ಕಲ್ಬುರ್ಗಿ | |
| ವಾಸ ಸ್ಥಳ | : | ಕಲಬುರ್ಗಿ | |

ದಿನಾಂಕಃ **18-06-2025**

ವಿ.ಸಿ.ಯಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.

**(Godutai Engineering College,** ಕಲಬುರ್ಗಿಯಲ್ಲಿ ಪ್ರೊಫೆಸರ್ ಎಂದು ಕೆಲಸ ಮಾಡುತ್ತಿರುವ ಡಾ॥ ಬಸಂತಿ ಅವರು ಆ ರಿಮೋಟ್ ಪಾಯಿಂಟ್ ನಲ್ಲಿ ಕೋ ಆರ್ಡಿನೇಟರ್ ಎಂದು ಇದ್ದಾರೆ**).**

ಮುಖ್ಯ ವಿಚಾರಣೆಃ ಶ್ರೀ ವಿ.ಟಿ.ಟಿ.-ವಿಶೇಷ ಪಿ.ಪಿ. ಯವರಿಂದಃ

1. 2013-14 ರಲ್ಲಿ ನಾನು ಕಲ್ಬುರ್ಗಿಯಲ್ಲಿರುವ ಶೆಟ್ಟಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದೆನು.

2. ದಿನಾಂಕಃ 13-06-2023 ರಂದು ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸರಿಂದ ಒಂದು ಪತ್ರ ಬಂದಿದ್ದು, ಸದರಿ ಪತ್ರದಲ್ಲಿ ಅನಿಲ್ ಕುಮಾರ್ .ಸಿ. ಮೆಕಾಲೆರವರಿಗೆ ಸಂಬಂಧಿಸಿದಂತೆ ವಿದ್ಯಾಭ್ಯಾಸದ ಶುಲ್ಕ ಪಾವತಿಸಿದ ಬಗ್ಗೆ ಮಾಹಿತಿ ಕೇಳಿದ್ದರು. ಸದರಿ ಕೋರಿಕೆ ಪತ್ರದ ಮೇರೆಗೆ ನಾನು ಮಾಹಿತಿಯನ್ನು ನನ್ನ ಪತ್ರದ ಮುಖಾಂತರ ಕರ್ನಾಟಕ ಲೋಕಾಯುಕ್ತ ಪೊಲೀಸರು ಚಿಕ್ಕಮಗಳೂರು ಇವರಿಗೆ ಕಳುಹಿಸಿಕೊಟ್ಟಿರುತ್ತೇನೆ.

3. ಸದರಿ ದಾಖಲೆಯನ್ನು ಸಾಕ್ಷಿಗೆ ವಿಸಿ ಮೂಲಕ ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಖರ್ಚು ಪುಸ್ತಕದ ಪುಟ ಸಂ. 809 ಮತ್ತು 810 ರಲ್ಲಿ ಇದ್ದು, ಸದರಿ ದಾಖಲೆಯನ್ನು ನಿ.ಪಿ.109 ಎಂದು ಗುರುತಿಸಲಾಯಿತು, ಪುಟ ಸಂ. 810 ನ್ನು ನಿ.ಪಿ. 109(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಕೆ.ಎಸ್.ಎಸ್.ಪಿ ವಕೀಲರಿಂದಃ

4. ಅನಿಲ್ ಕುಮಾರ್ .ಸಿ. ಮೆಕಾಲೆರವರ ಅಡ್ಮಿಷನ್ ನಂಬರನ್ನು ನಿ.ಪಿ.109 ರ ದಾಖಲೆಯಲ್ಲಿ ನಮೂದು ಮಾಡಿಲ್ಲ. ಅಡ್ಮಿಷನ್‌ಗೆ ಸಂಬಂಧಿಸಿದಂತೆ ದಾಖಲೆ ಕೊಟ್ಟಿಲ್ಲ.

5. ನಿ.ಪಿ.109(ಎ) ಎಂದು ಗುರುತಿಸಲಾದ ದಾಖಲೆಯಲ್ಲಿ ವಿದ್ಯಾಭ್ಯಾಸದ ಖರ್ಚಿನ ವಿವರವನ್ನು ಪ್ರವೇಶ ಶುಲ್ಕ, ದೇಣಿಗೆ, ಸಮವಸ್ತ್ರದ ಖರ್ಚು, ಪುಸ್ತಕದ ಖರ್ಚು,

ವಾಹನದ ಖರ್ಚು ಎಂದು ನಮೂದು ಮಾಡಿದ್ದು, ಈ ಬಗ್ಗೆ ರಸೀದಿ ಕೊಟ್ಟಿಲ್ಲ. ಸದರಿ ರಸೀದಿಗಳ ನಂಬರನ್ನು ಸಹಾ ನಿ.ಪಿ.109(ಎ) ದಾಖಲೆಯಲ್ಲಿ ನಮೂದು ಮಾಡಿಲ್ಲ. ಅನಿಲ್ ಕುಮಾರ್ .ಸಿ. ಮೆಕಾಲೆರವರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರು ಎಂದರೆ ಸರಿ. ಅವರಿಗೆ ವಿದ್ಯಾರ್ಥಿ ವೇತನ ಬರುತ್ತಿತ್ತು ಎಂದರೆ ನನಗೆ ಸರಿಯಾದ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರಿದು ಸದರಿ ವಿದ್ಯಾರ್ಥಿಯದು ಮ್ಯಾನೇಜ್‌ಮೆಂಟ್ ಸೀಟ್ ಎಂದು ಹೇಳುತ್ತಾರೆ. ಆದರೂ ಸಹಾ ವಿದ್ಯಾರ್ಥಿ ವೇತನ ಬರುತ್ತಿತ್ತು ಎಂದರೆ ಸರಿ. ಎಷ್ಟು ವಿದ್ಯಾರ್ಥಿ ವೇತನ ಬರುತ್ತಿತ್ತು ಎಂದು ನಾನು ಪರಿಶೀಲನೆ ಮಾಡಿಲ್ಲ.

6. ಲೋಕಾಯುಕ್ತ ಪೊಲೀಸರ ಶಿಫಾರಸ್ಸಿನ ಮೇರೆಗೆ ನಿ.ಪಿ. 109(ಎ) ರೀತ್ಯಾ ಖರ್ಚಿನ ವಿವರವನ್ನು ಹೆಚ್ಚಿನ ಮೊತ್ತವನ್ನು ನಮೂದು ಮಾಡಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ಉದ್ದೇಶಕ್ಕೋಸ್ಕರ ಅಡ್ಮಿಷನ್ ನಂಬರ್ ಮತ್ತು ರಸೀದಿ ನಂಬರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-18-06-2025

**(ರಾಜೇಶ್ವರಿ ಎನ್ ಹೆಗಡೆ )**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಕೋ-ಆರ್ಡಿನೇಟರ್ ಸಹಿಃ -

ಚ

Visit **ecourts.gov.in** for updates or download mobile app "**eCourts Services**" from Android or iOS